ಡಿ.ಕೆ. ಶಿವಕುಮಾರ್
ಉಪ ಮುಖ್ಯ ಮಂತ್ರಿ

ವಿಧಾನ ಸೌಧ
ಬೆಂಗಳೂರು - 560 001

ದಿನಾಂಕ 09-07-2024

ಸಂಖ್ಯೆ:ಉಮು/205/2024-25

ರವರಿಗೆ,
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ
ವಿಧಾನಸೌಧ, ಬೆಂಗಳೂರು.

ಮಾನ್ಯರೇ,

**ವಿಷಯ:-** ರಾಮನಗರ ಜಿಲ್ಲೆಯನ್ನು ಬೆಂಗಳೂರು ದಕ್ಷಿಣ ಜಿಲ್ಲೆ ಎಂದು ಮರುನಾಮಕರಣ ಮಾಡಿ ರಾಮನಗರವನ್ನು ಜಿಲ್ಲಾ ಕೇಂದ್ರವನ್ನಾಗಿ ಘೋಷಿಸುವ ಬಗ್ಗೆ.

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮೊದಲು ದೊಡ್ಡಬಳ್ಳಾಪುರ, ನೆಲಮಂಗಲ, ಯಲಹಂಕ, ದೇವನಹಳ್ಳಿ, ಆನೇಕಲ್, ಬೆಂಗಳೂರು ದಕ್ಷಿಣ, ಬೆಂಗಳೂರು ಪೂರ್ವ, ಹೊಸಕೋಟೆ, ರಾಮನಗರ, ಮಾಗಡಿ, ಕನಕಪುರ ಮತ್ತು ಚನ್ನಪಟ್ಟಣ ತಾಲ್ಲೂಕುಗಳು ಬೆಂಗಳೂರು ಜಿಲ್ಲೆಯ ಭಾಗವಾಗಿದ್ದವು.

1986ರ ಸಾಲಿನಲ್ಲಿ ದೊಡ್ಡಬಳ್ಳಾಪುರ, ನೆಲಮಂಗಲ, ದೇವನಹಳ್ಳಿ, ಹೊಸಕೋಟೆ, ಚನ್ನಪಟ್ಟಣ, ರಾಮನಗರ, ಮಾಗಡಿ ಹಾಗೂ ಕನಕಪುರ ತಾಲ್ಲೂಕುಗಳನ್ನು ಸೇರಿಸಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯನ್ನಾಗಿ ಘೋಷಿಸಲಾಯಿತು.

ನಂತರ 2007ರ ಸಾಲಿನಲ್ಲಿ ದೊಡ್ಡಬಳ್ಳಾಪುರವನ್ನು ಕೇಂದ್ರ ಸ್ಥಾನವಾಗಿಟ್ಟುಕೊಂಡು ಹೊಸಕೋಟೆ, ನೆಲಮಂಗಲ, ದೇವನಹಳ್ಳಿ, ದೊಡ್ಡಬಳ್ಳಾಪುರ ಒಳಗೊಂಡಂತೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯನ್ನಾಗಿ ಘೋಷಿಸಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಎಂಬ ಹೆಸರನ್ನು ಹಾಗೇ ಉಳಿಸಿಕೊಳ್ಳಲಾಯಿತು.

--2

3210

**ಡಿ.ಕೆ. ಶಿವಕುಮಾರ್**
ಉಪ ಮುಖ್ಯ ಮಂತ್ರಿ

ವಿಧಾನ ಸೌಧ
ಬೆಂಗಳೂರು – 560 001

ದಿನಾಂಕ...........................



ಅದೇ ರೀತಿ ಮಾಗಡಿ, ಕನಕಪುರ, ಚನ್ನಪಟ್ಟಣ ಹಾಗೂ ರಾಮನಗರ ತಾಲೂಕುಗಳನ್ನು ಸೇರಿಸಿಕೊಂಡು ಹೊಸದಾಗಿ ರಾಮನಗರ ಜಿಲ್ಲೆಯನ್ನಾಗಿ 2007ರಲ್ಲಿ ಘೋಷಿಸಿ, ರಾಮನಗರವನ್ನು ಜಿಲ್ಲಾ ಕೇಂದ್ರವನ್ನಾಗಿ ಘೋಷಿಸಲಾಯಿತು.

ಪ್ರಸ್ತುತ, ಬೆಂಗಳೂರು ನಗರದ ಅಂತರಾಷ್ಟ್ರೀಯ ಖ್ಯಾತಿ, ಸಾರ್ವಭೌಮತೆ ಮತ್ತು ಘನತೆ ರಾಮನಗರ, ಮಾಗಡಿ, ಕನಕಪುರ, ಚನ್ನಪಟ್ಟಣ ಹಾಗೂ ಹಾರೋಹಳ್ಳಿ ತಾಲ್ಲೂಕುಗಳಿಗೆ ಲಭ್ಯ ಆಗಬೇಕೆಂಬುದು ಜನರ ಆಶಯ ಮತ್ತು ನಮ್ಮ ಚಿಂತನೆಯೂ ಕೂಡ.

ಆದ್ದರಿಂದ, ರಾಮನಗರ, ಚನ್ನಪಟ್ಟಣ, ಮಾಗಡಿ, ಕನಕಪುರ ಹಾಗೂ ಹಾರೋಹಳ್ಳಿ ತಾಲ್ಲೂಕುಗಳನ್ನು ಒಳಗೊಂಡ ರಾಮನಗರ ಜಿಲ್ಲೆಯನ್ನು ಬೆಂಗಳೂರು ದಕ್ಷಿಣ ಜಿಲ್ಲೆ ಎಂದು ಮರುನಾಮಕರಣ ಮಾಡಿ ಹಾಗೂ ರಾಮನಗರವನ್ನು ಇದರ ಜಿಲ್ಲಾ ಕೇಂದ್ರವಾಗಿ ಘೋಷಣೆ ಮಾಡಲು ಕೋರುತ್ತೇವೆ.

ತಮ್ಮ ವಿಶ್ವಾಸಿಗಳು,

(ಡಿ ಕೆ ಶಿವಕುಮಾರ್)

| ಕ್ರಸಂ | ಹೆಸರು | ಸಹಿ |
|---|---|---|
| 1 | ಶ್ರೀ ರಾಮಲಿಂಗಾರೆಡ್ಡಿ,<br>ಮಾನ್ಯ ರಾಮನಗರ ಜಿಲ್ಲಾ ಉಸ್ತುವಾರಿ ಸಚಿವರು. | |
| 2 | ಶ್ರೀ ಇಕ್ಬಾಲ್ ಹುಸೇನ್,<br>ಮಾನ್ಯ ವಿಧಾನಸಭಾ ಸದಸ್ಯರು, ರಾಮನಗರ. | |

---3

ಡಿ.ಕೆ. ಶಿವಕುಮಾರ್
ಉಪ ಮುಖ್ಯ ಮಂತ್ರಿ

ವಿಧಾನ ಸೌಧ
ಬೆಂಗಳೂರು – 560 001

ದಿನಾಂಕ..........................



| | | |
|---|---|---|
| 3 | ಶ್ರೀ ಡಿ.ಕೆ ಸುರೇಶ್,<br>ಮಾನ್ಯ ಮಾಜಿ ಸಂಸದರು,<br>ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರ. | [signature] |
| 4 | ಶ್ರೀ ಪುಟ್ಟಣ್ಣ,<br>ಮಾನ್ಯ ವಿಧಾನ ಪರಿಷತ್ ಸದಸ್ಯರು. | [signature] |
| 5 | ಶ್ರೀ ರವಿ ಎಸ್,<br>ಮಾನ್ಯ ವಿಧಾನ ಪರಿಷತ್ ಸದಸ್ಯರು. | [signature] |
| 6 | ಶ್ರೀ ಸುಧಾಮ್ ದಾಸ್,<br>ಮಾನ್ಯ ವಿಧಾನ ಪರಿಷತ್ ಸದಸ್ಯರು. | [signature] |
| 7 | ಶ್ರೀ ಸಿ.ಎಂ ಲಿಂಗಪ್ಪ,<br>ಮಾನ್ಯ ಮಾಜಿ ವಿಧಾನಸಭಾ & ವಿಧಾನ ಪರಿಷತ್ ಸದಸ್ಯರು | [signature] |
| 8 | ಶ್ರೀ ರಾಜು<br>ಮಾನ್ಯ ಮಾಜಿ ವಿಧಾನಸಭಾ ಸದಸ್ಯರು | [signature] |
| 9 | ಶ್ರೀ ಎಂ.ಸಿ ಅಶ್ವತ್<br>ಮಾನ್ಯ ಮಾಜಿ ವಿಧಾನಸಭಾ ಸದಸ್ಯರು | M C Avatt |
| 10 | ಶ್ರೀ ರಘುನಂದ ರಾಮಣ್ಣ<br>ಮಾನ್ಯ ಅಧ್ಯಕ್ಷರು, ಬಿ.ಎಂ.ಐ.ಸಿ.ಪಿ.ಎ | [signature] |
| 11 | ಶ್ರೀ ಜಿಯಾವುಲ್ಲಾ<br>ಮಾನ್ಯ ಉಪಾಧ್ಯಕ್ಷರು, ಕೆ.ಪಿ.ಸಿ.ಸಿ | [signature] |
| 12 | ಶ್ರೀ ಗಂಗಾಧರ್<br>ಮಾನ್ಯ ಅಧ್ಯಕ್ಷರು, ರಾಮನಗರ ಜಿಲ್ಲಾ ಕಾಂಗ್ರೆಸ್ ಸಮಿತಿ | [signature] |

13 R Krishna murthy. Kanakapura [signature]